ಅಧ್ಯಕ್ಷರು:- ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ವಿಷಯ:- ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆಯಲು ಅನುಸರಿಸುವ ಮಾನದಂಡ.

15(45)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಓದುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿ ಇರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಶಾಲೆಗಳ ಸಂಖ್ಯೆ ಜಿಲ್ಲಾವಾರು ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಯಾವ ಅನುಪಾತದಲ್ಲಿ ಇದೆ;

ಈ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯುವಲ್ಲಿ ಆಯಾ ಜಿಲ್ಲೆಗಳಲ್ಲಿ ಓದುವ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳ ಸಂಖ್ಯೆಯ ದೃಷ್ಟಿಯಿಂದ ಏನಾದರೂ ತಾರತಮ್ಯವಿದೆಯೇ;

ಉ) ತಾರತಮ್ಯವಿದ್ದರೆ ಇನ್ನು ಮುಂದೆ ಸರ್ಕಾರಿ; ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯುವಾಗ ಈ ತಾರತಮ್ಯ ಹೋಗಲಾಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು? ಎಷ್ಟು ವರ್ಷಗಳಲ್ಲಿ ಈ ತಾರತಮ್ಯವನ್ನು ಹೋಗಲಾಡಿಸಲಾಗುವುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ)		ವಿದ್ಯಾರ್ಥಿ	ವಿದ್ಯಾರ್ಥಿನಿಯರು
1.	ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ	3702915	3079397
	ಪ್ರೌಢ ಶಾಲೆ	896850	641650
2.	ಉರ್ದು ಮಾಧ್ಯಮ ಪ್ರಾಥಮಿಕ ಶಾಲೆ	229456	269809
	ಪ್ರೌಢ ಶಾಲೆ	19084	24749

(ಜಿಲ್ಲಾವಾರು ಮಾಹಿತಿ ಅನುಬಂಧ- 1 ಮತ್ತು 1-ಎ ನಲ್ಲಿ ನೀಡಿದೆ)

ಆ) ಸರ್ಕಾರಿ ಪ್ರಾಥಮಿಕ ಶಾಲೆ ಪ್ರೌಢ ಶಾಲೆ

39524 2194

(ಜಿಲ್ಲಾವಾರು ಮಾಹಿತಿ ಪಟ್ಟಿ ಅನುಬಂಧ-2)

ಇ) ಜಿಲ್ಲಾವಾರು ಮಾಹಿತಿ ಅನುಬಂಧ-3 ರಲ್ಲಿ ನೀಡಿದೆ.

ಈ) ಇಲ್ಲ- ವಿದ್ಯಾರ್ಥಿ:ವಿದ್ಯಾರ್ಥಿನಿಯರ ಅವಶ್ಯಕತೆ ಮತ್ತು ಸಂಖ್ಯೆಗೆ ಅನುಗುಣವಾಗಿ ಶಾಲೆಗಳನ್ನು ಪ್ರಾರಂಭಿಸಲಾಗುವುದು. ಸರ್ಕಾರಿ ಶಾಲೆಗಳ ಜೊತೆಗೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು ಇರುವುದರಿಂದ ಶಾಲೆಗಳ ಅವಶ್ಯಕತೆಯನ್ನು ಪೂರೈಸಲಾಗಿದೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ- 1

ರಾಜ್ಯದಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿ:ವಿದ್ಯಾರ್ಥಿನಿಯರ ಜಿಲ್ಲಾವಾರು ಮಾಹಿತಿ:

	ಪ್ರಾಥಮಿಕ ಶಾಲೆಗಳು			
	ಕನ್ನಡ ಮಾಧ್ಯಮ		ಉರ್ದು ಮಾಧ್ಯಮ	
ಜಿಲ್ಲೆಯ ಹೆಸರು	ವಿದ್ಯಾರ್ಥಿ	ವಿದ್ಯಾರ್ಥಿನಿಯರು	ವಿದ್ಯಾರ್ಥಿ	ವಿದ್ಯಾರ್ಥಿನಿಯರು
1	2	3	4	5
1. ಬೆಂಗಳೂರು ದಕ್ಷಿಣ ಜಿಲ್ಲೆ	67499	91771	13648	12627
2. ಬೆಂಗಳೂರು ಉತ್ತರ ಜಿಲ್ಲೆ	167815	181152	14728	12712
3. ಬೆಂಗಳೂರು ಗ್ರಾಂ ಜಿಲ್ಲೆ	89323	84138	4745	6025
4. ಕೋಲಾರ ಜಿಲ್ಲೆ	215426	197445	15604	19500
5. ತುಮಕೂರು ಜಿಲ್ಲೆ	197939	184922	11942	9380
6. ಚಿತ್ರದುರ್ಗ ಜಿಲ್ಲೆ	197552	168604	9731	15787
7. ಶಿವಮೊಗ್ಗ ಜಿಲ್ಲೆ	155839	146798	9723	11993
8. ಮೈಸೂರು ಜಿಲ್ಲೆ	232943	225413	12689	16557
9. ಮಂಡ್ಯ ಜಿಲ್ಲೆ	214535	200252	4251	4975
10. ಹಾಸನ ಜಿಲ್ಲೆ	128254	119759	4772	5499

1	2	3	4	5
11. ದಕ್ಷಿಣ ಕನ್ನಡ ಜಿಲ್ಲೆ	242375	219352	14	265
12. ಚಿಕ್ಕಮಗಳೂರು ಜಿಲ್ಲೆ	779323	75310	3039	3951
13. ಕೊಡಗು ಜಿಲ್ಲೆ	32722	30837	257	233
14. ಬೆಳಗಾಂ ಜಿಲ್ಲೆ	286785	215967	15550	21378
15. ಧಾರವಾಡ ಜಿಲ್ಲೆ	228808	248194	25574	30903
16. ಬಿಜಾಪುರ ಜಿಲ್ಲೆ	301573	254618	23079	24418
17. ಉತ್ತರ ಕನ್ನಡ ಜಿಲ್ಲೆ	92964	81480	7640	9379
18. ಗುಲ್ಬರ್ಗಾ ಜಿಲ್ಲೆ	264235	197342	23892	28963
19. ಬಳ್ಳಾರಿ ಜಿಲ್ಲೆ	186632	145002	6870	11608
20. ಬೀದರ್ ಜಿಲ್ಲೆ	136009	114324	14936	11773
21. ರಾಯಚೂರು ಜಿಲ್ಲೆ	164365	116496	3771	6995
ಒಟ್ಟು	3702915	3079397	229456	269809

ಅನುಬಂಧ- 1(ಎ)

ರಾಜ್ಯದಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಪ್ರೌಢ ಶಾಲೆಗಳಲ್ಲಿ ಓದುವ ವಿದ್ಯಾರ್ಥಿ:ವಿದ್ಯಾರ್ಥಿನಿಯರ ಜಿಲ್ಲಾವಾರು ಮಾಹಿತಿ:

	ಪ್ರೌಢ ಶಾಲೆಗಳು			
	ಕನ್ನಡ ಮಾಧ್ಯಮ		ಉರ್ದು ಮಾಧ್ಯಮ	
ಜಿಲ್ಲೆಯ ಹೆಸರು	ವಿದ್ಯಾರ್ಥಿ	ವಿದ್ಯಾರ್ಥಿ ನಿಯರು	ವಿದ್ಯಾರ್ಥಿ	ವಿದ್ಯಾರ್ಥಿ ನಿಯರು
1	2	3	4	5
1. ಬೆಂಗಳೂರು ದಕ್ಷಿಣ ಜಿಲ್ಲೆ	26553	23577	131	103
2. ಬೆಂಗಳೂರು ಉತ್ತರ ಜಿಲ್ಲೆ	44629	44919	53	42
3. ಬೆಂಗಳೂರು ಗ್ರಾಂ ಜಿಲ್ಲೆ	59549	56093	3164	4018
4. ಕೋಲಾರ ಜಿಲ್ಲೆ	50037	33300	182	316
5. ತುಮಕೂರು ಜಿಲ್ಲೆ	52495	41965	13	50

1	2	3	4	5
6. ಚಿತ್ರದುರ್ಗ ಜಿಲ್ಲೆ	52450	29076	770	1128
7. ಶಿವಮೊಗ್ಗ ಜಿಲ್ಲೆ	42450	34091	373	857
8. ಮೈಸೂರು ಜಿಲ್ಲೆ	49975	31214	-	-
9. ಮಂಡ್ಯ ಜಿಲ್ಲೆ	59449	53514	152	133
10. ಹಾಸನ ಜಿಲ್ಲೆ	41071	32753	168	241
11. ದಕ್ಷಿಣ ಕನ್ನಡ ಜಿಲ್ಲೆ	60285	49834	-	-
12. ಚಿಕ್ಕಮಗಳೂರು ಜಿಲ್ಲೆ	18669	15575	32	183
13. ಕೊಡಗು ಜಿಲ್ಲೆ	10040	9744	-	-
14. ಬೆಳಗಾಂ ಜಿಲ್ಲೆ	74335	34859	1455	2211
15. ಧಾರವಾಡ ಜಿಲ್ಲೆ	71677	50530	2921	3767
16. ಬಿಜಾಪುರ ಜಿಲ್ಲೆ	65641	30811	2344	2553
17. ಉತ್ತರ ಕನ್ನಡ ಜಿಲ್ಲೆ	20149	17249	1360	1545
18. ಗುಲ್ಬರ್ಗಾ ಜಿಲ್ಲೆ	32460	19067	2633	3554
19. ಬಳ್ಳಾರಿ ಜಿಲ್ಲೆ	30160	16503	179	825
20. ಬೀದರ್ ಜಿಲ್ಲೆ	18855	10442	2788	1987
21. ರಾಯಚೂರು ಜಿಲ್ಲೆ	15921	6493	360	1236
ಒಟ್ಟು	896850	641607	19084	24749

ಅನುಬಂಧ-2

ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಜಿಲ್ಲಾವಾರು ವಿವರ:

	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು
1.	ಬೆಂಗಳೂರು ದಕ್ಷಿಣ ಜಿಲ್ಲೆ	771	49
2.	ಬೆಂಗಳೂರು ಉತ್ತರ ಜಿಲ್ಲೆ	452	40
3.	ಬೆಂಗಳೂರು ಗ್ರಾಮಾಂತರ ಜಿಲ್ಲೆ	2417	96
4.	ಕೋಲಾರ ಜಿಲ್ಲೆ	3066	131
5.	ತುಮಕೂರು ಜಿಲ್ಲೆ	3619	91
6.	ಚಿತ್ರದುರ್ಗ ಜಿಲ್ಲೆ	2146	121
7.	ಶಿವಮೊಗ್ಗ ಜಿಲ್ಲೆ	2174	104
8.	ಮೈಸೂರು ಜಿಲ್ಲೆ	2444	164
9.	ಮಂಡ್ಯ ಜಿಲ್ಲೆ	1742	128
10.	ಹಾಸನ ಜಿಲ್ಲೆ	2339	137
11.	ದಕ್ಷಿಣ ಕನ್ನಡ ಜಿಲ್ಲೆ	1902	189
12.	ಚಿಕ್ಕಮಗಳೂರು ಜಿಲ್ಲೆ	1407	73
13.	ಕೊಡಗು ಜಿಲ್ಲೆ	386	32
14.	ಬೆಳಗಾಂ ಜಿಲ್ಲೆ	2187	105
15.	ಧಾರವಾಡ ಜಿಲ್ಲೆ	2119	125
16.	ಬಿಜಾಪುರ ಜಿಲ್ಲೆ	2222	91
17.	ಉತ್ತರ ಕನ್ನಡ ಜಿಲ್ಲೆ	1994	58
18.	ಗುಲ್ಬರ್ಗಾ ಜಿಲ್ಲೆ	2277	172
19.	ಬಳ್ಳಾರಿ ಜಿಲ್ಲೆ	1373	71
20.	ಬೀದರ್ ಜಿಲ್ಲೆ	762	91
21.	ರಾಯಚೂರು ಜಿಲ್ಲೆ	1725	126
	ಒಟ್ಟು	39524	2194

ಅನುಬಂಧ-3

ಜಿಲ್ಲಾವಾರು ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ:ವಿದ್ಯಾರ್ಥಿನಿಯರ ಸಂಖ್ಯೆಯ ಅನುಪಾತ:

ಕ್ರ. ಸಂ.	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲೆಗಳು		ಪ್ರೌಢ ಶಾಲೆಗಳು	
		ವಿದ್ಯಾರ್ಥಿ	ವಿದ್ಯಾರ್ಥಿನಿಯರು	ವಿದ್ಯಾರ್ಥಿ	ವಿದ್ಯಾರ್ಥಿನಿಯರು
1	2	3	4	5	6
1.	ಬೆಂಗಳೂರು ದಕ್ಷಿಣ ಜಿಲ್ಲೆ	1:131	1:135	1:592	1:525
2.	ಬೆಂಗಳೂರು ಉತ್ತರ ಜಿಲ್ಲೆ	1:403	1:428	1:1146	1:1153
3.	ಬೆಂಗಳೂರು ಗ್ರಾಂ ಜಿಲ್ಲೆ	1:039	1:37	1:204	1:196
4.	ಕೋಲಾರ ಜಿಲ್ಲೆ	1:75	1:71	1:359	1:259
5.	ತುಮಕೂರು ಜಿಲ್ಲೆ	1:60	1:54	1:391	1:314
6.	ಚಿತ್ರದುರ್ಗ ಜಿಲ್ಲೆ	1:97	1:86	1:433	1:246
7.	ಶಿವಮೊಗ್ಗ ಜಿಲ್ಲೆ	1:76	1:73	1:285	1:232
8.	ಮೈಸೂರು ಜಿಲ್ಲೆ	1:101	1:99	1:424	1:265
9.	ಮಂಡ್ಯ ಜಿಲ್ಲೆ	1:126	1:118	1:465	1:419
10.	ಹಾಸನ ಜಿಲ್ಲೆ	1:57	1:54	1:279	1:223
11.	ದಕ್ಷಿಣ ಕನ್ನಡ ಜಿಲ್ಲೆ	1:127	1:115	1:158	1:131
12.	ಚಿಕ್ಕಮಗಳೂರು ಜಿಲ್ಲೆ	1:59	1:56	1:88	1:74
13.	ಕೊಡಗು ಜಿಲ್ಲೆ	1:85	1:80	1:456	1:443
14.	ಬೆಳಗಾಂ ಜಿಲ್ಲೆ	1:138	1:109	1:194	1:95
15.	ಧಾರವಾಡ ಜಿಲ್ಲೆ	1:148	1:134	1:777	1:566
16.	ಬಿಜಾಪುರ ಜಿಲ್ಲೆ	1:146	1:126	1:777	1:367
17.	ಉತ್ತರ ಕನ್ನಡ ಜಿಲ್ಲೆ	1:127	1:99	1:74	1:48
18.	ಗುಲ್ಬರ್ಗಾ ಜಿಲ್ಲೆ	1:50	1:46	1:371	1:324
19.	ಬಳ್ಳಾರಿ ಜಿಲ್ಲೆ	1:141	1:114	1:353	1:201
20.	ಬೀದರ್ ಜಿಲ್ಲೆ	1:160	1:133	1:86	1:49
21.	ರಾಯಚೂರು ಜಿಲ್ಲೆ	1:97	1:72	1:123	1:59

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಯನ್ನು ಇದೇ ಅಧಿವೇಶನಾವಧಿಯಲ್ಲಿ ಕೇಳುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈ ಪ್ರಶ್ನೆಯಲ್ಲಿನ ಕೊನೆಯ ಪ್ರಶ್ನೆಗಾದರೂ ಮಾನ್ಯ ಸಚಿವರು ಉತ್ತರ ಕೊಡಲಿ...

ಅಧ್ಯಕ್ಷರು:- ತರಿಸಿ ಕೊಡುತ್ತೇನೆ. ಮಾನ್ಯ ಸದಸ್ಯರುಗಳವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಶ್ನೋತ್ತರದ ಅವಧಿಯಲ್ಲಿ ಪ್ರಶ್ನೆ ಕೇಳುವವರು ಮತ್ತು ಉತ್ತರ ಕೊಡುವವರು ತಯಾರಾಗಿ ಬರಬೇಕು. ಪ್ರಶ್ನೆ ಕೇಳುವವರು ಸಂಕ್ಷಿಪ್ತವಾಗಿ ಕೇಳಬೇಕು ಹಾಗೂ ಉತ್ತರ ಕೊಡುವವರೂ ಸಂಕ್ಷಿಪ್ತವಾಗಿ ಉತ್ತರಿಸಬೇಕು. ದಿವಸವೂ ಪ್ರಶ್ನೋತ್ತರ ವೇಳೆಯ ಅವಧಿಯು ಮುಗಿದ ಮೇಲೆಯೂ ನಡೆಸುವುದು ಕಷ್ಟವಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಒಂದು ಗಂಟೆಯಾದ ಕೂಡಲೇ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯ ಮಾಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಅವಧಿಯಲ್ಲಿ ತಮ್ಮತಮ್ಮಲ್ಲೆ ಮಾತನಾಡಿಕೊಳ್ಳುತ್ತಿರುವುದು ಬಹಳ ಹೆಚ್ಚಾಗುತ್ತಿದೆ, ಮಾತಿನ ರಭಸವೂ ಹೆಚ್ಚಾಗುತ್ತಿದೆ. ಈ ಬಗ್ಗೆ ಸಹಕರಿಸಬೇಕೆಂದು ಎಲ್ಲಾ ಶಾಸಕರೂ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು):- ಅಧ್ಯಕ್ಷರೇ ದಿನಾಂಕ 12ನೇ ಫೆಬ್ರವರಿ 1997ರ ಮೊದಲನೆಯ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 27 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ:- ಹೃದಯರೋಗ ತಜ್ಞಶಸ್ತ್ರ ಚಿಕಿತ್ಸೆಯ ಬಗ್ಗೆ.

2(61)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೃದಯರೋಗ ತಜ್ಞ ಶಸ್ತ್ರ ಚಿಕಿತ್ಸೆ ವಿಭಾಗದಲ್ಲಿ ಪದವಿ ಪಡೆದವರ ಸಂಖ್ಯೆ ಎಷ್ಟು;

ಆ) ಸರ್ಕಾರಿ ಸೇವೆಯಲ್ಲಿ ಎಷ್ಟು ಹೃದಯರೋಗ ತಜ್ಞ ಶಸ್ತ್ರ ಚಿಕಿತ್ಸಕರು ಹಾಗೂ ವೈದ್ಯರು ಇರುವರು? ಯಾವ ಯಾವ ಆಸ್ಪತ್ರೆಗಳಲ್ಲಿ ಸೇವೆ ಮಾಡುತ್ತಿರುವರು? (ವಿವರ ನೀಡುವುದು).